## ವಿವೇಕಪ್ರಭ ಪತ್ರಿಕೆಯ ಚಂದಾವಿವರ

ಬಿಡಿ ಪ್ರತಿ: ರೂ.10; ವಾರ್ಷಿಕ: ರೂ 100 ;
ಮೂರು ವರ್ಷ: ರೂ.250; ಆಜೀವ (25 ವರ್ಷ): ರೂ.1500;
ಪೋಷಕ ಸಹಾಯಧನ : ರೂ.3000 ಅಥವಾ ಹೆಚ್ಚು
ವಿದೇಶಗಳಿಗೆ: (ಏರ್‌ಮೇಲ್): ವಾರ್ಷಿಕ: $15;
ಮೂರುವರ್ಷ: $45; ಆಜೀವ (25 ವರ್ಷ): $300;
ಪೋಷಕ ಸಹಾಯಧನ: $600 ಅಥವಾ ಹೆಚ್ಚು

ಚಂದಾಹಣವನ್ನು (Sri Ramakrishna Ashrama, Viveka prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ.20 ರಿಯಾಯತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

## ವಿವೇಕಪ್ರಭ ಪತ್ರಿಕೆಗೆ ಚಂದಾಸಂಗ್ರಾಹಕರಾಗಿ, ಶೇ. 20 ಕಮಿಷನ್ ಗಳಿಸಿ.

**ಇದೀಗ ವರ್ಣರಂಜಿತವಾಗಿ ಮೂಡಿಬರುತ್ತಿದ್ದು, ಆಕರ್ಷಕ ಶೀರ್ಷಿಕೆಗಳನ್ನು ಒಳಗೊಂಡಿರುವ 'ವಿವೇಕಪ್ರಭ' ಪತ್ರಿಕೆಯನ್ನು ನಿಮ್ಮ ಬಂಧುಬಾಂಧವರಿಗೆ, ಸ್ನೇಹಿತರಿಗೆ ಪರಿಚಯ ಮಾಡಿಕೊಡಿ.**

ಕೇವಲ 100 ರೂಪಾಯಿಗಳಿಗೆ 1 ವರ್ಷ ಕಾಲ 500 ಪುಟಗಳಿಗೂ ಹೆಚ್ಚಿನ
ಕೇವಲ 250 ರೂಪಾಯಿಗಳಿಗೆ 3 ವರ್ಷಗಳ ಕಾಲ 1500 ಪುಟಗಳಿಗೂ ಹೆಚ್ಚಿನ
ಕೇವಲ 1500 ರೂಪಾಯಿಗಳಿಗೆ 25 ವರ್ಷಗಳ ಕಾಲ 12,500 ಪುಟಗಳಿಗೂ ಹೆಚ್ಚಿನ

ಸಮೃದ್ಧ ಮೌಲ್ಯಯುತ ಆಧ್ಯಾತ್ಮಿಕ ಸಾಹಿತ್ಯ

**ಇಂದೇ ತ್ವರೆ ಮಾಡಿ. ನಿಮಗೆ ಬೇಕಾದ ಪ್ರಚಾರ ಸಾಮಗ್ರಿಗಳು, ರಸೀದಿ ಪುಸ್ತಕಗಳಿಗೆ**
**ಈ ಫೋನ್ ಸಂಖ್ಯೆಗೆ ಕರೆಮಾಡಿ ಅಥವಾ ಸಂದೇಶ ಕಳಿಸಿ – 9481533505 (ಶ್ರೀ ವೇಣುಗೋಪಾಲ್ ಕೆ.ಪಿ.)**

## ಜ್ಞಾನವಾಹಿನಿ

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಗ್ರಾಮೀಣ ಪ್ರದೇಶಗಳಲ್ಲಿ 'ಜ್ಞಾನವಾಹಿನಿ' ಎಂಬ ವ್ಯಕ್ತಿತ್ವವಿಕಸನ ಕಾರ್ಯಕ್ರಮವನ್ನು ಮುಖ್ಯವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮೇಲ್ಪಟ್ಟು ನಡೆಸುತ್ತಿದೆ. ಈ ಕಾರ್ಯಕ್ರಮದಲ್ಲಿ ವಿವೇಕಾನಂದರ ಪ್ರತಿಮೆಯ ಮೆರವಣಿಗೆ, ವ್ಯಕ್ತಿತ್ವವಿಕಸನ ಶಿಬಿರ, ಚಲನಚಿತ್ರ ಪ್ರದರ್ಶನ, ಉತ್ತಮ ಪುಸ್ತಕಗಳ ಮಾರಾಟ ಮತ್ತು ಸಾರ್ವಜನಿಕರಿಗಾಗಿ ಕಾರ್ಯಕ್ರಮಗಳು ಇರುತ್ತವೆ. 2010 ರ ಜೂನ್ ತಿಂಗಳಿನಿಂದ ಈ ಕಾರ್ಯಕ್ರಮವನ್ನು ಆಯೋಜಿಸಲು ಅವಕಾಶ ಇದೆ. ಕನಿಷ್ಠ ಆರು ಹಳ್ಳಿಗಳಲ್ಲಿ, ಒಂದು ವಾರ ಕಾಲ ಈ ಕಾರ್ಯಕ್ರಮವನ್ನು ಆಯೋಜಿಸಬೇಕು ಮತ್ತು ನಾಲ್ಕು ಮಂದಿ ಕಾರ್ಯಕರ್ತರ ಸರಳ ಊಟ-ವಸತಿಗಳ ಏರ್ಪಾಡು ಮಾಡಬೇಕು. ವಸತಿ ಒಂದು ಕೇಂದ್ರಸ್ಥಾನದಲ್ಲಿ ಇರಬೇಕು. ಇತರ ಎಲ್ಲ ಖರ್ಚನ್ನೂ ಆಶ್ರಮದ ವತಿಯಿಂದಲೇ ಭರಿಸಲಾಗುತ್ತದೆ. ಈ ಕಾರ್ಯಕ್ರಮವನ್ನು ನಿಮ್ಮ ಪ್ರದೇಶದಲ್ಲಿ ಆಯೋಜಿಸಲು ಇಚ್ಛೆ ಇದ್ದರೆ, ಇಂದೇ ಈ ಫೋನ್ ಸಂಖ್ಯೆಯನ್ನು ಸಂಪರ್ಕಿಸಿ: 9972847734.

## ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಕ್ಯಾಂಪ್)

### 2010ನೇ ಜುಲೈ 1 ರಿಂದ 5 ರವರೆಗೆ

**ಶಿಬಿರದ ತರಗತಿಗಳನ್ನು ನಡೆಸುವ ಮಾಧ್ಯಮ : ಕನ್ನಡ ಮತ್ತು ಇಂಗ್ಲಿಷ್**

**ಐದು ದಿನಗಳ ಶಿಬಿರಕ್ಕಾಗಿ ಊಟ, ವಸತಿಯ ಖರ್ಚು : ರೂ.1000/– ಮಾತ್ರ**

ಶಿಬಿರದ ಎಲ್ಲ ಐದು ದಿನಗಳ ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. ಶಿಬಿರದ ವಿವರಗಳನ್ನು ಒಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ಸ್ವವಿಳಾಸವಿರುವ (10 cm x 23 cm) ಲಕೋಟೆಗೆ ರೂ 5 ರ ಅಂಚೆ ಸ್ಟ್ಯಾಂಪ್ ಲಗತ್ತಿಸಿ, ಕರೆಸ್ಪಾಂಡೆಂಟ್‌ರ ಹೆಸರಿಗೆ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.


**ತುಂಬಿಸಿದ ಅರ್ಜಿ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 15–6–2010**

Ramakrishna Institute of Moral and Spiritual Education, Yadavagiri, Mysore - 570020
Phone:0821-2417666; 2412800; e-mail: mysore.rimse@gmail.com

# ಉತ್ತರಮೀಮಾಂಸಾ ದರ್ಶನದಲ್ಲಿ ಬ್ರಹ್ಮಜಿಜ್ಞಾಸೆ

**ದ**ರ್ಶನಗಳು ಭಾರತೀಯ ತತ್ತ್ವಚಿಂತನಾಧಾರೆಯ ಕವಲುಗಳು. ದಾರ್ಶನಿಕ ಸಾಹಿತ್ಯದ ಮೊದಲನೆಯ ಹಂತ ಸೂತ್ರಗಳು. ಎರಡನೆಯ ಘಟ್ಟ ಅವುಗಳ ಮೇಲೆ ಬರೆದ ಭಾಷ್ಯ. ಮೂರನೆಯ ಸ್ತರ ಆ ಭಾಷ್ಯವನ್ನು ವಿವರಿಸಿ ಬರೆದ ಹಲವಾರು ವ್ಯಾಖ್ಯಾನಗಳು ಇತ್ಯಾದಿ. ಅಂತಹ ಆರು ದರ್ಶನಗಳು ಸಾಂಪ್ರದಾಯಿಕವಾಗಿ ಬೆಳೆದು ಬಂದಿವೆ. ಅವುಗಳಲ್ಲಿ ನೇರವಾಗಿ ವೇದವಾಙ್ಮಯಕ್ಕೆ ಸಂಬಂಧಪಟ್ಟಿರುವುದು ಮೀಮಾಂಸಾ ದರ್ಶನ. ವೇದದ ಕರ್ಮಕಾಂಡದ ಭಾಗಕ್ಕೆ ಮಹತ್ವ ಕೊಡುವುದು **ಪೂರ್ವಮೀಮಾಂಸಾ**. ಜ್ಞಾನಕಾಂಡಕ್ಕೆ ಮಹತ್ವ ಕೊಡುವುದು **ಉತ್ತರಮೀಮಾಂಸಾ**.

ಜ್ಞಾನಕಾಂಡವು ಉಪನಿಷತ್ತುಗಳು ಅಥವಾ ವೇದಾಂತವನ್ನು ಒಳಗೊಂಡಿದೆ. ಅವುಗಳ ತತ್ತ್ವವನ್ನು ತರ್ಕ ಅಥವಾ ಯುಕ್ತಿಯ ಮೂಲಕ ನಿರ್ಧರಿಸಲು ವೇದಾಂತಸೂತ್ರಗಳನ್ನು ಬಾದರಾಯಣರು ರಚಿಸಿದ್ದಾರೆ. ಅವು ಬ್ರಹ್ಮತತ್ತ್ವವನ್ನು ಬೋಧಿಸುತ್ತವೆ. ಅದನ್ನೇ ವಿಶೇಷವಾಗಿ ವಿಶ್ಲೇಷಿಸುವ ಈ ಸೂತ್ರಗಳಿಗೆ **ಬ್ರಹ್ಮಸೂತ್ರಗಳು** ಎಂದು ಹೆಸರು. ಶರೀರದಲ್ಲಿ ಪರಿಭಾವಿಸಬಹುದಾದ ಆತ್ಮನ ವಿಚಾರವನ್ನು ತಿಳಿಸುವುದರಿಂದ ಈ ಸೂತ್ರಗಳನ್ನು **ಶಾರೀರಕ ಸೂತ್ರ**ಗಳೆಂದೂ, ಪ್ರಮುಖವಾಗಿ ಸಂನ್ಯಾಸಿಗಳ ಅನುಸಂಧಾನಕ್ಕೆ ಇರುವುದರಿಂದ **ಭಿಕ್ಷುಸೂತ್ರ**ಗಳೆಂದೂ ಕರೆಯುತ್ತಾರೆ.




ಉಪನಿಷತ್ತುಗಳಲ್ಲಿ ಹಲವಾರು ಬಗೆಯ ವಿಚಾರಧಾರೆಗಳು ಬರುತ್ತವೆ. ಆದರೆ ಅವುಗಳ ಸುವ್ಯವಸ್ಥಿತ ಪ್ರತಿಪಾದನೆ ಕಂಡುಬರುವುದಿಲ್ಲ. ಬ್ರಹ್ಮಸೂತ್ರಗಳಲ್ಲಿ ಅಂತಹ ಪ್ರಯತ್ನ ನಡೆದಿದೆ. ಬೇರೆಬೇರೆ ಉಪನಿಷತ್ತುಗಳ ವಾಕ್ಯಗಳನ್ನು ಇಲ್ಲಿ ಕ್ರಮವಾಗಿ ಜೋಡಿಸುತ್ತಾರೆ, ಆ ಮೂಲಕ ಒಂದೇ ಅರ್ಥ ಹೊರಹೊಮ್ಮುವಂತೆ ವಿಶ್ಲೇಷಿಸುತ್ತಾರೆ. ಈ ವಿಷಯವಾಗಿ ಶ್ರೀಶಂಕರರು ಹೀಗೆ ಬರೆಯುತ್ತಾರೆ: **ವೇದಾಂತವಾಕ್ಯಕುಸುಮಗ್ರಥನಾರ್ಥತ್ವಾತ್ ಸೂತ್ರಾಣಾಮ್** (*ಬ್ರಹ್ಮಸೂತ್ರ ಭಾಷ್ಯ*, ೧:೧:೧೩) – "ಬ್ರಹ್ಮಸೂತ್ರಗಳು ವೇದಾಂತವಾಕ್ಯಗಳೆಂಬ ಕುಸುಮಗಳನ್ನು ಮಾಲೆಯಾಗಿ ಕಟ್ಟಲು ರಚಿತವಾಗಿರುತ್ತವೆ."

ಬಾದರಾಯಣರು ಬ್ರಹ್ಮಸೂತ್ರಗಳ ಕರ್ತೃ. ವೇದವನ್ನು ರಚಿಸಿದ ವ್ಯಾಸರೇ ಇವರು ಎನ್ನುವುದು ಸಾಂಪ್ರದಾಯಿಕ ನಂಬಿಕೆ. ಒಟ್ಟು ೫೫೫ ಬ್ರಹ್ಮಸೂತ್ರಗಳಿವೆ. ಅವುಗಳನ್ನು ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಿದ್ದಾರೆ. ಒಂದೊಂದು ಅಧ್ಯಾಯದಲ್ಲೂ ನಾಲ್ಕು ಪಾದಗಳಿವೆ. ಒಂದೊಂದು ಪಾದದಲ್ಲೂ ಹಲವು ಅಧಿಕರಣಗಳಿವೆ. ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟ ಸೂತ್ರಗಳು ಒಂದು ಅಧಿಕರಣದಲ್ಲಿ ಇರುತ್ತವೆ.

ಈ ಸೂತ್ರಗಳಿಗೆ ಅನೇಕ ಭಾಷ್ಯಗಳಿವೆ. ಆದರೆ, ಆಚಾರ್ಯತ್ರಯರಾದ ಶಂಕರ, ರಾಮಾನುಜ, ಮಧ್ವರ ಭಾಷ್ಯಗಳು ಹೆಚ್ಚು ಪ್ರಸಿದ್ಧವಾದುವು. ಅವು ಕ್ರಮವಾಗಿ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತವೆ.

ಬ್ರಹ್ಮಜಿಜ್ಞಾಸೆಯೇ ಉತ್ತರಮೀಮಾಂಸಾ ಶಾಸ್ತ್ರದ ಮುಖ್ಯ ಉದ್ದೇಶ. ಅಂತಹ ಜಿಜ್ಞಾಸೆಯ ಆವಶ್ಯಕತೆ ಮತ್ತು ಮಹತ್ವವನ್ನು **ಅಥಾತೋ ಬ್ರಹ್ಮಜಿಜ್ಞಾಸಾ** (**ಅಥ ಅತಃ ಬ್ರಹ್ಮಜಿಜ್ಞಾಸಾ**) ಎಂಬ ಮೊದಲ ಸೂತ್ರ ತಿಳಿಸುತ್ತದೆ. ಇದಕ್ಕೆ ಆಚಾರ್ಯತ್ರಯರಾದ ಶ್ರೀಮಧ್ವ, ಶ್ರೀರಾಮಾನುಜ ಮತ್ತು ಶ್ರೀಶಂಕರರು ನೀಡಿರುವ ವಿವರಣೆ ಒಟ್ಟು ವೇದಾಂತ ದರ್ಶನದ ಅಧ್ಯಯನದ ಮಹತ್ವವನ್ನು ನಮಗೆ ಮನಗಾಣಿಸುತ್ತದೆ.

### ಶ್ರೀಮಧ್ವ ಮತ

ಶ್ರೀಮಧ್ವರು **ಅಥ** ಮತ್ತು **ಅತಃ** ಪದಗಳನ್ನು ಹೀಗೆ ವಿವರಿಸುತ್ತಾರೆ: **ಅಥ** ಶಬ್ದವು ಮಂಗಳವನ್ನು ಮತ್ತು ಸಾಧಕನ ಅರ್ಹತೆಯನ್ನು ಸೂಚಿಸುತ್ತದೆ. ಅರ್ಹತೆ ಪಡೆದ ಸಾಧಕನು ಮಾತ್ರ ಮುಂದೆ ಹೇಳುವ ಬ್ರಹ್ಮಜಿಜ್ಞಾಸೆಯನ್ನು ಮಾಡಬಹುದು. **ಅತಃ** ಶಬ್ದವು ಹೇತು ಅಥವಾ ಉದ್ದೇಶವನ್ನು ಹೇಳುತ್ತದೆ. ಇಲ್ಲಿ ಮೋಕ್ಷವೇ ಉದ್ದೇಶ.

**ಬ್ರಹ್ಮಶಬ್ದಶ್ಚ ವಿಷ್ಣಾವೇವ** – ಶ್ರೀಮಧ್ವರ ಪ್ರಕಾರ, 'ಬ್ರಹ್ಮ' ಶಬ್ದವು ಸರ್ವವ್ಯಾಪಕನಾದ ನಾರಾಯಣನನ್ನೇ ಸೂಚಿಸುತ್ತದೆ. **ಯತೋ ನಾರಾಯಣಪ್ರಸಾದಮೃತೇ ನ ಮೋಕ್ಷಃ, ನ ಚ ಜ್ಞಾನಂ ವಿನಾಽತ್ಯರ್ಥಪ್ರಸಾದಃ, ಅತೋ ಬ್ರಹ್ಮಜಿಜ್ಞಾಸಾ ಕರ್ತವ್ಯಾ** – "ನಾರಾಯಣನ ಅನುಗ್ರಹವಿಲ್ಲದೆ ಮೋಕ್ಷಪ್ರಾಪ್ತಿಯಾಗದು. ಅಂತಹ ಮೋಕ್ಷಕಾರಕವಾದ ಅನುಗ್ರಹವು ಅಪರೋಕ್ಷಜ್ಞಾನವಿಲ್ಲದೆ ದೊರಕದು. ಆದ್ದರಿಂದ ಬ್ರಹ್ಮಜಿಜ್ಞಾಸೆಯು ಅವಶ್ಯ ಮಾಡಬೇಕಾದ ಕರ್ತವ್ಯವಾಗಿದೆ."

### ಶ್ರೀರಾಮಾನುಜ ಮತ

ಶ್ರೀರಾಮಾನುಜರು **ಅಥ** ಎಂಬ ಶಬ್ದಕ್ಕೆ ಅನಂತರ ಎಂದೂ **ಅತಃ** ಎಂಬ ಶಬ್ದಕ್ಕೆ 'ಮೊದಲು ಆದುದರ ಕಾರಣದಿಂದಲೇ' ಎಂದೂ ಅರ್ಥ ಮಾಡುತ್ತಾರೆ. ಬ್ರಹ್ಮಜಿಜ್ಞಾಸೆಗೆ ಮೊದಲು

ಕರ್ಮಗಳ ಬಗ್ಗೆ ಜಿಜ್ಞಾಸೆ ನಡೆದಿತ್ತು ಎಂದು ಇದು ಸೂಚಿಸುತ್ತದೆ. ತದನಂತರವಷ್ಟೇ ಬ್ರಹ್ಮಜಿಜ್ಞಾಸೆ ಆರಂಭವಾಗುತ್ತದೆ. ವೇದದ ಕರ್ಮಕಾಂಡವು ಅಲ್ಪವೂ ಅಸ್ಥಿರವೂ ಆದ ಫಲವನ್ನು ಮಾತ್ರವೇ ಕೊಡುತ್ತದೆ. ಹೀಗಾಗಿ ಇದನ್ನು ಅಧ್ಯಯನ ಮಾಡಿದ ಜಿಜ್ಞಾಸುವಿಗೆ ಅದಕ್ಕಿಂತ ಮಿಗಿಲಾದ ಮೋಕ್ಷದಲ್ಲಿ ಅಭಿಲಾಷೆ ಉಂಟಾಗುತ್ತದೆ. ಏಕೆಂದರೆ ಮೋಕ್ಷವು ಅನಂತವೂ ಸ್ಥಿರವೂ ಆದ ಫಲವುಳ್ಳದ್ದು. ಅದಕ್ಕೆ ದಾರಿ ಮಾಡಿಕೊಡುವ ಬ್ರಹ್ಮಜಿಜ್ಞಾಸೆಯು ಕರ್ಮಕಾಂಡದ ಅಧ್ಯಯನದ ನಂತರವಷ್ಟೇ ಆಗುತ್ತದೆ ಎಂಬುದು ಶ್ರೀರಾಮಾನುಜರ ಅಭಿಪ್ರಾಯ.

ಶ್ರೀರಾಮಾನುಜರ ಪ್ರಕಾರ **ಬ್ರಹ್ಮ** ಶಬ್ದದ ಮೂಲಕ ಪುರುಷೋತ್ತಮನೇ ಮುಖ್ಯಾರ್ಥದಲ್ಲಿ ಹೇಳಲ್ಪಟ್ಟಿದ್ದಾನೆ. **ಬ್ರಹ್ಮಶಬ್ದೇನ ಚ ಸ್ವಭಾವತಃ ನಿರಸ್ತನಿಖಿಲದೋಷಃ ಅನವಧಿಕ ಅತಿಶಯ ಅಸಂಖ್ಯೇಯ ಕಲ್ಯಾಣಗುಣಗಣಃ ಪುರುಷೋತ್ತಮಃ ಅಭಿಧೀಯತೇ–** ಅಂತಹ ಬ್ರಹ್ಮನಲ್ಲಿ ಸ್ವಭಾವಯುತವಾಗಿಯೇ ಯಾವ ದೋಷವೂ ಇರುವುದಿಲ್ಲ; ಆತನಲ್ಲಿ ಲೆಕ್ಕವಿಲ್ಲದಷ್ಟು ಕಲ್ಯಾಣಗುಣಗಳ ಸಮೂಹಗಳೇ ಕಂಡುಬರುತ್ತವೆ. ಅಂದರೆ ಒಂದು ಗುಣದಲ್ಲಿಯೇ ಪ್ರಕಾರಭೇದದ ಕಾರಣ ಅನೇಕ ಗುಣಗಳ ಅಂತರ್ಭಾವವಾಗಿದೆ. ಹಾಗೆಯೇ ಆ ಗುಣಗಳ ಅತಿಶಯ ಅಥವಾ ವೈಶಿಷ್ಟ್ಯವು ಅವಾಙ್ಮನಸಗೋಚರವಾಗಿ, ಗಣನೆಗೆ ಸಿಕ್ಕುವುದಿಲ್ಲ. **ಬ್ರಹ್ಮ** ಪದವನ್ನು ಎಲ್ಲ ಕಡೆ 'ಬೃಹತ್' 'ದೊಡ್ಡದು' ಎಂಬ ಅರ್ಥದಲ್ಲಿಯೇ ಉಪಯೋಗಿಸುತ್ತಾರೆ. ಆದ್ದರಿಂದ ಇಲ್ಲಿಯೂ, ಪುರುಷೋತ್ತಮನಲ್ಲಿಯೇ ಆ ಶಬ್ದವನ್ನು ಬಳಸಬೇಕು. ಏಕೆಂದರೆ ಅವನು ಸರ್ವೇಶ್ವರನು. ತಾಪತ್ರಯಗಳಿಂದ ದುಃಖಿಸುತ್ತಿರುವವರು ಅಮೃತಪ್ರಾಪ್ತಿಗಾಗಿ ಅವನನ್ನೇ ಜಿಜ್ಞಾಸೆ ಮಾಡಬೇಕು, ಉಪಾಸಿಸಬೇಕು. –**ಜ್ಞಾತುಮ್ ಇಚ್ಛಾ ಜಿಜ್ಞಾಸಾ** – ತಿಳಿಯುವುದಕ್ಕೆ ಇಚ್ಛೆ ಪಡುವುದೇ ಜಿಜ್ಞಾಸೆ. ಜ್ಞಾನವನ್ನೇ ಇಲ್ಲಿ ಇಚ್ಛೆ ಪಡುವುದು. ಆದ್ದರಿಂದ ಜ್ಞಾನವನ್ನು ಅರಿಯಬೇಕು. ಇದು ಈ ಸೂತ್ರದ ಅಭಿಪ್ರಾಯ.

### ಶ್ರೀಶಂಕರ ಮತ

ಶ್ರೀಶಂಕರರು **ಅಥ** ಶಬ್ದಕ್ಕೆ 'ಅನಂತರ' ಎಂಬ ಅರ್ಥವನ್ನು ಕೊಡುತ್ತಾರೆ. ಅವರ ಪ್ರಕಾರ ಬ್ರಹ್ಮಜಿಜ್ಞಾಸೆಗೆ ಮೊದಲು ಸಾಧನ ಚತುಷ್ಟಯಗಳನ್ನು ಪಾಲಿಸಬೇಕು. ಅವೆಂದರೆ, **ನಿತ್ಯಾನಿತ್ಯವಸ್ತುವಿವೇಕ** (ಯಾವುದು ನಿತ್ಯ, ಯಾವುದು ಅನಿತ್ಯ ಎಂಬ ವಿವೇಚನೆ), **ಇಹಾಮುತ್ರಫಲಭೋಗವಿರಾಗ** (ಈ ಲೋಕದ ಮತ್ತು ಪರ ಲೋಕದ ವಿಷಯಭೋಗಗಳಲ್ಲಿ ನಿರಾಸಕ್ತಿ), **ಶಮದಮಾದಿ ಸಾಧನ ಸಂಪತ್ತು** (ಶಮ, ದಮ, ಉಪರತಿ, ತಿತಿಕ್ಷೆ, ಸಮಾಧಾನ ಮತ್ತು ಶ್ರದ್ಧೆ ಎನ್ನುವ ಸಾಧನೆಗಳ ಸಂಪತ್ತು) ಮತ್ತು **ಮುಮುಕ್ಷುತ್ವ** (ಮೋಕ್ಷಕ್ಕಾಗಿ ಬಯಕೆ) – **ತಸ್ಮಾತ್ ಅಥ ಶಬ್ದೇನ ಯಥೋಕ್ತ ಸಾಧನ ಸಂಪತ್ತ್ಯಾನಂತರ್ಯಮ್ ಉಪದಿಶ್ಯತೇ**– "ಹೀಗಾಗಿ ಅಥ ಶಬ್ದಕ್ಕೆ 'ಹಿಂದೆ ಹೇಳಿದ ಸಾಧನಸಂಪತ್ತಿನ ನಂತರ' ಎಂದೇ ಅರ್ಥವಾಗುತ್ತದೆ."

ಇನ್ನು **ಅತಃ** ಎನ್ನುವುದು ಬ್ರಹ್ಮಜಿಜ್ಞಾಸೆಯ ಕಾರಣ ಅಥವಾ ಉದ್ದೇಶವನ್ನು ಕುರಿತು ಹೇಳುತ್ತದೆ. ವೇದಗಳಲ್ಲಿ ಹೇಳಿರುವ ಕರ್ಮಗಳು ಅನಿತ್ಯಫಲವನ್ನು ಕೊಡುತ್ತವೆ. ಅವುಗಳಿಂದ ಪಡೆಯುವ ಫಲಗಳೆಲ್ಲ ಕ್ಷೀಣವಾಗುವಂಥವು. – **ಬ್ರಹ್ಮವಿದಾಪ್ನೋತಿ ಪರಮ್** – ಬ್ರಹ್ಮವನ್ನು ತಿಳಿದವನು ಪರಮಗತಿಯನ್ನು ಗಳಿಸಿಕೊಳ್ಳುತ್ತಾನೆ. ಹೀಗಾಗಿ ಬ್ರಹ್ಮಜ್ಞಾನದಿಂದ ಮಾತ್ರವೇ ಪರಮಪುರುಷಾರ್ಥಸಾಧನ. ಆದ್ದರಿಂದ ಸಾಧನಸಂಪತ್ತುಗಳನ್ನು ಅನುಷ್ಠಾನ ಮಾಡಿದನಂತರ ಬ್ರಹ್ಮಜಿಜ್ಞಾಸೆಯನ್ನು ಅವಶ್ಯವಾಗಿ ಮಾಡಬೇಕು.

ಬ್ರಹ್ಮನ ಜಿಜ್ಞಾಸೆಯೇ ಬ್ರಹ್ಮಜಿಜ್ಞಾಸೆ. ಉಪನಿಷತ್ತುಗಳು **ತದ್ವಿಜಿಜ್ಞಾಸಸ್ವ ತದ್ ಬ್ರಹ್ಮ** – "ಅದರ ಜಿಜ್ಞಾಸೆಯನ್ನು ಮಾಡು, ಅದೇ ಬ್ರಹ್ಮ" ಎಂಬ ವಾಕ್ಯಗಳ ಮೂಲಕ ನೇರವಾಗಿ, ಬ್ರಹ್ಮಜಿಜ್ಞಾಸೆ ಸಾಧಕನು ಮಾಡಬೇಕಾದ ಕರ್ತವ್ಯ ಎಂದು ತೋರಿಸಿಕೊಟ್ಟಿವೆ. ಈ ಜಿಜ್ಞಾಸೆಯ ಗುರಿ ಜ್ಞಾನ. ಜ್ಞಾನದಿಂದ ಬ್ರಹ್ಮವು ದೊರಕುತ್ತದೆ. ಬ್ರಹ್ಮನನ್ನು ತಿಳಿದುಕೊಳ್ಳುವುದೇ ಪರಮಪುರುಷಾರ್ಥ. ಏಕೆಂದರೆ ಇದರಿಂದ ಸಂಸಾರಕ್ಕೆ ಕಾರಣವಾದ ಅವಿದ್ಯೆಯು ನಿಶ್ಶೇಷವಾಗಿ ನಾಶವಾಗುತ್ತದೆ.

ಬ್ರಹ್ಮವೆಂದರೆ ನಿತ್ಯ–ಶುದ್ಧ–ಬುದ್ಧ–ಮುಕ್ತ ಸ್ವಭಾವವುಳ್ಳ ಹಾಗೂ ಸರ್ವಜ್ಞ ಮತ್ತು ಸರ್ವಶಕ್ತವಾದ ತತ್ತ್ವ. ಈ ಗುಣಗಳು ಕೇವಲ ಬ್ರಹ್ಮಕ್ಕೆ ಮಾತ್ರ ಮೀಸಲು. ಅದಲ್ಲದೆ ಬ್ರಹ್ಮವು ಎಲ್ಲದರ ಆತ್ಮಸ್ವರೂಪವಾಗಿದೆ. ಪ್ರತಿಯೊಬ್ಬನೂ ನಾನು ಇದ್ದೇನೆಂದು ಭಾವಿಸಿಕೊಳ್ಳುತ್ತಾನೆಯೇ ಹೊರತು, 'ನಾನು ಇಲ್ಲ' ಎಂದು ಎಂದೂ ಅಂದುಕೊಳ್ಳಲಾರ. – **ಆತ್ಮಾ ಚ ಬ್ರಹ್ಮ** – ಯಾವುದನ್ನು ಒಬ್ಬ ವ್ಯಕ್ತಿಯು 'ನಾನು' ಎಂದು ಅಂದುಕೊಳ್ಳುತ್ತಾನೋ ಅದೇ ಬ್ರಹ್ಮ. ಹೀಗಾಗಿ ಅದು ಎಲ್ಲರ ಅನುಭವಕ್ಕೆ ಬರುವ ತತ್ತ್ವವೇ ಆಗಿದೆ.

ಈಗಾಗಲೇ ಎಲ್ಲರಿಗೂ ತಿಳಿದಿದೆ ಎಂದಮೇಲೆ ಅದರ ಬಗ್ಗೆ ವಿಚಾರ ಮಾಡುವುದಾದರೂ ಏಕೆ? ಬ್ರಹ್ಮವು ಸಾಮಾನ್ಯರೂಪದಿಂದ ಪ್ರಸಿದ್ಧವಾಗಿದ್ದರೂ, ಅದರ ವಿಶೇಷರೂಪದ ಅರಿವು ಬಹಳಷ್ಟು ಜನಕ್ಕೆ ಇರುವುದಿಲ್ಲ. ಚೈತನ್ಯದಿಂದ ಕೂಡಿದ ದೇಹವೇ ಆತ್ಮ ಎಂದು ಸಾಮಾನ್ಯ ಜನರು ಮತ್ತು ನಾಸ್ತಿಕರು ತಿಳಿದುಕೊಂಡಿದ್ದಾರೆ. ಚೈತನ್ಯದಿಂದ ಕೂಡಿದ ಇಂದ್ರಿಯಗಳೇ ಆತ್ಮ ಎಂದು ಇನ್ನು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಮನಸ್ಸೇ ಆತ್ಮವೆಂದು ಹೇಳುತ್ತಾರೆ. ಹೀಗೆ ವಿವಿಧ ಮತಗಳಿಗೆ ಸೇರಿದವರು ಆತ್ಮನ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದಾರೆ. ಇವುಗಳನ್ನು ವಿಚಾರಮಾಡದೆಯೇ ಯಾವುದೋ ಒಂದು ಅಭಿಪ್ರಾಯಕ್ಕೆ ಗಂಟುಬಿದ್ದರೆ, ನಿಃಶ್ರೇಯಸ್ಸನ್ನು ಕಳೆದುಕೊಂಡು ಅನರ್ಥಕ್ಕೆ ಈಡಾಗಬೇಕಾದೀತು. ಆದುದರಿಂದಲೇ ಮೊದಲನೆಯ ಸೂತ್ರದಲ್ಲಿ ಬ್ರಹ್ಮಜಿಜ್ಞಾಸೆಯನ್ನು ಉಪದೇಶ ಮಾಡಿದೆ. ಹಾಗೆ ಮಾಡುವ ಮೂಲಕ ವೇದಾಂತವಾಕ್ಯಗಳ ಮೀಮಾಂಸೆಯನ್ನು ಆರಂಭ ಮಾಡಲಾಗಿದೆ. ಅದಕ್ಕಾಗಿ ತರ್ಕದ ಸಹಾಯವನ್ನು ತೆಗೆದುಕೊಳ್ಳಲಾಗಿದೆ. ಅಂತಹ ತರ್ಕವು ಉಪನಿಷತ್ತುಗಳ ಅಭಿಪ್ರಾಯಕ್ಕೆ ಅನುಗುಣವಾಗಿರಬೇಕು. ಈ ಬಗೆಯ ಜಿಜ್ಞಾಸೆಯಿಂದ ನಿಃಶ್ರೇಯಸ್ಸು ಪ್ರಾಪ್ತಿಯಾಗುತ್ತದೆ. ಹೀಗೆ ಶ್ರೀಶಂಕರಾಚಾರ್ಯರು ಬ್ರಹ್ಮತತ್ತ್ವದ ಗರಿಮೆಯನ್ನೂ ಬ್ರಹ್ಮಜ್ಞಾನದ ಮಹತ್ವವನ್ನೂ ಎತ್ತಿಹೇಳಿದ್ದಾರೆ.

ಈ ಪ್ರಕಾರ ಬ್ರಹ್ಮಜಿಜ್ಞಾಸೆಯ ಆವಶ್ಯಕತೆಯನ್ನು ಮೂರು ಜನ ಆಚಾರ್ಯರೂ ಒತ್ತಿ ಹೇಳಿದ್ದಾರೆ.

## ಸಮನ್ವಯಾಧ್ಯಾಯ

ಇದು ಬ್ರಹ್ಮಸೂತ್ರಗಳ ಮೊದಲನೆಯ ಅಧ್ಯಾಯದ ಹೆಸರು. ಇಲ್ಲಿ ಉಪನಿಷತ್ತುಗಳ ವಾಕ್ಯಗಳನ್ನು, ಅವುಗಳ ಮೂಲಕ ಒಂದೇ ಅರ್ಥ ಬರುವಂತೆ ವಿಶ್ಲೇಷಿಸಿದ್ದಾರೆ. ಇದನ್ನೇ **ಸಮನ್ವಯ** ಎಂದು ಕರೆಯುತ್ತಾರೆ. ಈ ಅಧ್ಯಾಯವು ಜಿಜ್ಞಾಸೆಯ ಆವಶ್ಯಕತೆಯನ್ನು ಎತ್ತಿಹೇಳುವುದರ ಮೂಲಕ ಆರಂಭವಾಗುತ್ತದೆ. ಅನಂತರ ಈ ಜಗತ್ತಿನ ಸೃಷ್ಟಿ, ಪಾಲನೆ ಮತ್ತು ಸಂಹಾರಗಳು ಯಾರಿಂದ ನಡೆಯುವುದೋ ಅದೇ, ಪ್ರಸ್ತುತ ಜಿಜ್ಞಾಸೆಯ ವಿಷಯವಾದ ಬ್ರಹ್ಮ ಎಂದು ತಿಳಿಸುತ್ತದೆ. ಆ ಮೂಲಕ ಸೃಷ್ಟಿಗೆ ಜಡ ಪ್ರಕೃತಿಯು ಕಾರಣ ಎನ್ನುವ ಸಾಂಖ್ಯರ ವಾದವನ್ನು ತಳ್ಳಿಹಾಕುತ್ತದೆ. ಅನೇಕ ಬಗೆಯ ತರ್ಕಗಳು ಮತ್ತು ಉಪನಿಷದ್ವಾಕ್ಯಗಳ ಆಧಾರದ ಮೇಲೆ ಅಚೇತನವಾದ **ಪ್ರಕೃತಿ** ಅಥವಾ **ಪ್ರಧಾನ**ವು ಜಗತ್ತಿನ ಮೂಲವಾಗಲು ಸಾಧ್ಯವಿಲ್ಲ ಎನ್ನುವುದನ್ನು ವಿಶ್ಲೇಷಿಸಿ, ಬ್ರಹ್ಮವೇ ಜಗತ್ಕಾರಣ ಎಂದು ಇಲ್ಲಿ ಸಾಧಿಸಿತೋರಿಸಲಾಗಿದೆ.

ಬ್ರಹ್ಮದ ಸ್ವರೂಪ ಆನಂದಮಯ. ಹಾಗೆಯೇ ಅದು ವಿಶ್ವವ್ಯಾಪಕವೂ, ಎಲ್ಲದರ ಅಂತರ್ಯಾಮಿಯೂ ಆಗಿದೆ. ಅದು ಎಲ್ಲವನ್ನೂ ಬೆಳಗುವ ಜ್ಯೋತಿ ಕೂಡ. ಬ್ರಹ್ಮವು ಎಲ್ಲದಕ್ಕೂ ಆಶ್ರಯಸ್ಥಾನವಾಗಿದೆ. ಹಾಗೆಯೇ ಇದು **ಭೂಮ** ಮತ್ತು **ಅಕ್ಷರ** ಸ್ವರೂಪವೂ ಆಗಿದೆ. ಛಾಂದೋಗ್ಯ ಉಪನಿಷತ್ತು ಹೇಳುವಂತೆ, ಎಲ್ಲಿ ಬೇರೊಂದನ್ನು ನೋಡುವುದಿಲ್ಲವೋ, ಬೇರೊಂದನ್ನು ಕೇಳುವುದಿಲ್ಲವೋ, ಬೇರೊಂದನ್ನು ಅರಿಯುವುದಿಲ್ಲವೋ ಅದು **ಭೂಮ** (೧.೩.೮). ಹಾಗೆಯೇ ಕ್ಷಯವಿಲ್ಲದುದು ಅಕ್ಷರ. ಅಕ್ಷರವು ಮಾತ್ರವೇ ವಿಜ್ಞಾತೃತ್ವವನ್ನು (ತನಗೆ ತಾನೇ ತಿಳಿದುಕೊಳ್ಳುವ ಸಾಮರ್ಥ್ಯ) ಹೊಂದಿರಲು ಸಾಧ್ಯ ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ. ಸಮ್ಯಕ್‌ದರ್ಶನಕ್ಕೆ ಧ್ಯೇಯವಾಗುವುದು ಪರಬ್ರಹ್ಮವೇ. ಏಕೆಂದರೆ, ಯಾವುದಕ್ಕಿಂತ ಶ್ರೇಷ್ಠವಾದುದು ಇನ್ನೊಂದಿಲ್ಲವೋ ಅದೇ ಬ್ರಹ್ಮ. ಆತನು ಸ್ವಪ್ರಕಾಶನಾದವನು, ಭೂತಭವಿಷ್ಯತ್ತುಗಳಿಗೆ ಒಡೆಯನು, ಅಣುವಿನಲ್ಲಿ ಅಣುವಾಗಿಯೂ ಮಹತ್ತಿನಲ್ಲಿ ಮಹತ್ತಾಗಿಯೂ ಇರುವವನು.

ಒಟ್ಟಿನಲ್ಲಿ ಉಪನಿಷತ್ತುಗಳೆಲ್ಲವೂ ಹೇಳುವ ತತ್ತ್ವವೆಂದರೆ ಬ್ರಹ್ಮ ಮಾತ್ರ. ಅದು ದೇಶಕಾಲಗಳಿಗೆ ಅತೀತವಾಗಿರುವ ನಿರಪೇಕ್ಷ ತತ್ತ್ವ. ಇದೇ ಮೋಕ್ಷಾರ್ಥಿಗಳ ಮನೋಧರ್ಮಕ್ಕೆ ಅನುಸಾರವಾಗಿ ಸಾಪೇಕ್ಷವಾದ ಸತ್ಯಗಳಂತೆ ತೋರಿಕೊಳ್ಳುತ್ತದೆ. ಅನಂತವಾದ ದೇಶಕಾಲ ವಿಭಾಗಗಳೆಲ್ಲವೂ ಏಕವಾದ ಬ್ರಹ್ಮವನ್ನೇ ಅಭಿಮುಖವಾಗಿ ಹೊಂದಿವೆ.

## ಅವಿರೋಧಾಧ್ಯಾಯ

ಇದು ಎರಡನೆಯ ಅಧ್ಯಾಯದ ಹೆಸರು. ಬ್ರಹ್ಮಸೂತ್ರಗಳ ರಚನೆಯ ಕಾಲದಲ್ಲಿ ಇದ್ದ ಇತರ ದರ್ಶನಗಳನ್ನು ಇದರಲ್ಲಿ ಪ್ರಬಲವಾಗಿ ಖಂಡಿಸಲಾಗಿದೆ. ಅದರಲ್ಲೂ ಸಾಂಖ್ಯದರ್ಶನವನ್ನು ಹೆಚ್ಚಾಗಿ ನಿರಾಕರಿಸಲಾಗಿದೆ. ಇದಲ್ಲದೆ, ವೈಶೇಷಿಕ, ಬೌದ್ಧ, ಜೈನ, ಪಾಶುಪತ ಮತ್ತು ಭಾಗವತ ಪಕ್ಷಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಹೇಳಿ, ಖಂಡಿಸಲಾಗಿದೆ.

ಈ ಅಧ್ಯಾಯದಲ್ಲಿ ಬ್ರಹ್ಮನ ಸೃಷ್ಟಿಕರ್ತೃತ್ವಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಬ್ರಹ್ಮವು ಜಗತ್ತಿನ ನಿಮಿತ್ತ ಕಾರಣವಷ್ಟೇ ಅಲ್ಲ, ಉಪಾದಾನಕಾರಣ ಕೂಡ (ಬ್ರಹ್ಮವೇ ಜಗತ್ತಿನ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ). ಹೀಗೆ ಸತ್ಕಾರ್ಯವಾದವನ್ನು ಬಾದರಾಯಣರು ತಮ್ಮ ಸೂತ್ರಗಳಲ್ಲಿ ಎತ್ತಿ ಹಿಡಿದಿದ್ದಾರೆ. ಕಾರಣವೇ ಕಾರ್ಯವಾಗಿ ಪರಿಣಮಿಸುತ್ತದೆ ಎನ್ನುವುದು ಸತ್ಕಾರ್ಯವಾದ. ಹೀಗಾಗಿ ಬ್ರಹ್ಮದ ಕಾರ್ಯವಾಗಿರುವ ಜಗತ್ತು ಬ್ರಹ್ಮನಿಗಿಂತ ಬೇರೆ ಅಲ್ಲ, ಇವೆರಡೂ ಅಭಿನ್ನ ಎನ್ನುವುದು ಈ ಎರಡನೆಯ ಅಧ್ಯಾಯದಲ್ಲಿನ ಸೂತ್ರಗಳು ಸ್ಥಾಪಿಸುವ ಸಿದ್ಧಾಂತ.

ಬಟ್ಟೆಯನ್ನು ಮಡಿಸಿಟ್ಟಿದ್ದಾಗ ಅದರ ಉದ್ದಗಲಗಳು ಕಾಣಿಸುವುದಿಲ್ಲ; ಬಿಡಿಸಿ ನೋಡಿದಾಗ ಗೋಚರವಾಗುತ್ತವೆ. ಹಾಗೆಯೇ ಜಗತ್ತು, ತಾನು ವ್ಯಕ್ತವಾಗುವುದಕ್ಕಿಂತ ಮುಂಚೆ ಮತ್ತು ವ್ಯಕ್ತವಾದ ಮೇಲೂ ಕೂಡ ಬ್ರಹ್ಮವೇ ಆಗಿರುತ್ತದೆ. ಅವ್ಯಕ್ತವಾಗಿ ಬ್ರಹ್ಮನಲ್ಲಿ ಏನಿತ್ತೋ ಅದೇ ವ್ಯಕ್ತವಾಗುತ್ತದೆ. ಈ ಸೃಷ್ಟಿಕಾರ್ಯದಲ್ಲಿ ತನಗಿಂತ ಬೇರೆಯಾದ ಯಾವ ಸಾಧನಗಳೂ ಬ್ರಹ್ಮನಿಗೆ ಬೇಕಾಗಿಲ್ಲ. ಹಾಗೂ ಸೃಷ್ಟಿಕಾರ್ಯದಿಂದ ಬ್ರಹ್ಮನಿಗೆ ಯಾವ ಪ್ರಯೋಜನವೂ ಆಗಬೇಕಾದ್ದಿಲ್ಲ. ಏಕೆಂದರೆ ಅವನು ನಿತ್ಯತೃಪ್ತನು. ಪ್ರಪಂಚವೆನ್ನುವುದು ಉದ್ದೇಶರಹಿತವಾದ ಲೀಲೆ ಮಾತ್ರ. ಅದು ಆನಂದವೇ ಗುಣವಾಗಿ ಉಳ್ಳದ್ದು. ಎಲ್ಲವೂ ಆನಂದದಿಂದ ಹುಟ್ಟಿ, ಬೆಳೆದು ಆನಂದವನ್ನೇ ಸೇರುತ್ತವೆ. ಅದನ್ನು ಅರಿತವರು ಮುಕ್ತರಾಗುತ್ತಾರೆ. ಸಕಲವೂ ಆನಂದದಲ್ಲಿ ಭಾಗಿಯಾಗುವುದೇ ಸೃಷ್ಟಿಯ ಅಂತಿಮ ಗುರಿ. ಹೀಗೆ ಬ್ರಹ್ಮವು ಸೃಷ್ಟಿಯ ಅಂತಿಮ ಕಾರಣವೂ ಆಗಿದೆ.

## ಸಾಧನಾಧ್ಯಾಯ

ಮೂರನೆಯ ಅಧ್ಯಾಯವು ಬ್ರಹ್ಮವಿದ್ಯೆಯ ಸಾಧನಗಳನ್ನು ಬೋಧಿಸುತ್ತದೆ. ಬ್ರಹ್ಮ ಸೂರ್ಯನಂತೆ. ಜೀವಿಯು ಅದರ ಕಿರಣಗಳಂತೆ. ಸೂರ್ಯನು ಯಾವುದರಿಂದಲೂ ಬಾಧಿತನಾಗುವುದಿಲ್ಲ. ಅದೇ ರೀತಿ ಬ್ರಹ್ಮವೂ ಕೂಡ. ಕಿರಣಗಳು ಮಾತ್ರ ವಿವಿಧ ಅಂಶಗಳಿಂದ ಬಾಧಿತವಾಗಬಹುದು. ಅದೇ ರೀತಿ ಜೀವಿ ಕೂಡ ಕರ್ತೃವಾಗಿ, ಭೋಕ್ತೃವಾಗಿ ಪಾಪಪುಣ್ಯಗಳನ್ನೂ ಸುಖದುಃಖಗಳನ್ನೂ ಅನುಭವಿಸುತ್ತಾನೆ. ಬ್ರಹ್ಮಜ್ಞಾನವನ್ನು ಪಡೆಯಲು ಅಗತ್ಯವಾದ ಸಾಧನಗಳನ್ನೂ ಹಾಗೆಯೇ ಚಿತ್ತಶುದ್ಧಿಯನ್ನು ಸಂಪಾದಿಸಿಕೊಳ್ಳಲು ಉಪನಿಷತ್ತುಗಳಲ್ಲಿ ಹೇಳಿರುವ ನಿಯಮಗಳನ್ನೂ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಸಮಾಜದ ಎಲ್ಲ ವರ್ಗದವರಿಗೂ ಮೋಕ್ಷಕ್ಕೆ ಅವಕಾಶವುಂಟು ಎನ್ನುವುದನ್ನು ಈ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ. ಬಾದರಾಯಣರು ಜೀವನ್ಮುಕ್ತಿಯನ್ನು ಒಪ್ಪುತ್ತಾರೆ. ಪ್ರಾರಬ್ಧಕರ್ಮ ಕೊನೆಗೊಳ್ಳುವವರೆಗೆ ಜ್ಞಾನಿ ದೇಹಧಾರಿಯಾಗಿರುತ್ತಾನೆ. ಆ ಸಮಯದಲ್ಲಿ ಅದು ಜ್ಞಾನಿಯನ್ನೇನೂ ಬಾಧಿಸುವುದಿಲ್ಲ.

## ಫಲಾಧ್ಯಾಯ

ಈ ಅಧ್ಯಾಯದಲ್ಲಿ ಬ್ರಹ್ಮಜ್ಞಾನಿಯ ಸ್ಥಿತಿಯನ್ನು ವಿವರಿಸಲಾಗಿದೆ. ಮುಕ್ತಾತ್ಮನು ಪರಮಾತ್ಮನಿಗಿಂತ ಬೇರೆಯಾಗದೆ ಇರುತ್ತಾನೆ. ಹೀಗಾಗಿ ಅವನದು ಕೇವಲ ಚಿತ್‌ಸ್ವರೂಪ. "ನಾನು ಬ್ರಹ್ಮವೇ ಆಗಿರುವೆ"